**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/10/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 31.01.2014

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗ ಚುನಾವಣ ನಡೆಸುವಿಕ- ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣೆ ನಡೆಸುವ ವಿಷಯವಾಗಿ ಉಸ್ತುವಾರಿ ನಡೆಸಲು ಪ್ರಾಂತೀಯ ವೀಕ್ಷಕರನ್ನು ನೇಮಿಸುವ ವಿಷಯ.

**ಉಲ್ಲೇಖ:-**
1) ಸಹಕಾರ ಚುನಾವಣಾ ಆಯೋಗದ ಆದೇಶ ಸಂ:ಸಚುಆ/ಡಿ.ಇ.ಓ/ಮಾ.ಸ/45/2013-14, ದಿನಾಂಕ:08.01.2014 ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ/ ಮಾರ್ಗಸೂಚಿಗಳು/ ಸ್ಪಷ್ಟೀಕರಣ
2) ಆಯೋಗದ ಅಧಿಸೂಚನೆ ಸಂ:ಸಚುಆ/46/ಚುನಾವಣೆ/ಅ.ಸೂ/2013-14 ಮಾಧ್ಯಮಿಕ ಸಂಘಗಳ ಮಂಡಲಿಗಳ ಚುನಾವಣಾ ದಿನಾಂಕಗಳನ್ನು ನಿಗದಿಪಡಿಸಿರುವುದು.

***

**ಪ್ರಸ್ತಾವನೆ:-**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಸಹಕಾರ ಸಂಘಗಳ ನಿಯಮಗಳು 1960/ಸೌಹಾರ್ದ ಸಹಕಾರಿ ನಿಯಮಗಳು 2004 ಗಳಿಗೆ ಅನುಗುಣವಾಗಿ ಎರಡನೇ ಹಂತದಲ್ಲಿ ಮಾಧ್ಯಮಿಕ ಸಂಘಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಕುರಿತು ರಾಜ್ಯ ಸಹಕಾರ ಚುನಾವಣಾ ಆಯೋಗವು ಉಲ್ಲೇಖ (1) ರ ರೀತ್ಯಾ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕ ಮಾಡಿ ಈಗಾಗಲೇ ಸೂಚನೆ/ನಿರ್ದೇಶನಗಳನ್ನು ನೀಡಿದೆ. ಉಲ್ಲೇಖ (2) ರಲ್ಲಿ ಕಾಣಿಸಿರುವ ಅಧಿಸೂಚನೆಯನ್ನು ಆಯೋಗವು ಈಗಾಗಲೇ ಹೊರಡಿಸಿ ಚುನಾವಣಾ ದಿನಾಂಕಗಳನ್ನು ನಿಗದಿಡಪಡಿಸಿರುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಕ್ಷೇತ್ರಗಳ ಚುನಾವಣೆಗಳು ಬಹಳ ಮಹತ್ವ ಪೂರ್ಣ ಪ್ರಾಮುಖ್ಯತೆಯನ್ನು ಹೊಂದಿರುತ್ತವೆ. ಚುನಾವಣೆಗಳು ನಿಷ್ಪಕ್ಷಪಾತವಾಗಿ, ಮುಕ್ತವಾಗಿ, ಪಾರದರ್ಶಕತೆಯಿಂದ ಕೂಡಿರಬೇಕು ಮತ್ತು ಜನರ ವಿಶ್ವಾಸಾರ್ಹತೆ ಗಳಿಸಬೇಕಾಗಿರುತ್ತದೆ. ಇದು ಸಹಕಾರ ಸಂಘಗಳ ಚುನಾವಣೆಗಳಿಗೂ ಸಹ ಅನ್ವಯಿಸುತ್ತದೆ. ಸಹಕಾರ ಸಂಘದ ಪ್ರತಿಯೊಬ್ಬ ಸದಸ್ಯನೂ ಸಂಘದ ಚಟುವಟಿಕೆಗಳಲ್ಲಿ ರಚನಾತ್ಮಕವಾಗಿ ಭಾಗವಹಿಸುವುದರಿಂದ ಸಂಘದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಅರ್ಹರಾದ ಪ್ರತಿ ಸದಸ್ಯರೂ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸ ಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಇದಕ್ಕೆ ಚುನಾವಣಾ ಆಯೋಗವು ಸೂಕ್ತ ಅವಕಾಶಗಳನ್ನು ಮಾಡಿಕೊಡಬೇಕಾಗಿರುತ್ತದೆ. ಚುನಾವಣೆಗಳು ಎಲ್ಲಾ ವರ್ಗದ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳು ಧರ್ಮ, ಜಾತಿ, ಮತ, ಪಂಗಡ ಮತ್ತು ಭ್ರಷ್ಟಾಚಾರಗಳಿಂದ ಮುಕ್ತವಾಗಿರಬೇಕಾಗಿರುತ್ತದೆ. ಯಾವುದೇ ಭಾಷೆ, ಜಾತಿ, ಮತಗಳ ಆಧಾರದ ಮೇಲೆ ಸದಸ್ಯರು ಮತ ಚಲಾಯಿಸುವಂತಾಗಬಾರದು ರಹಸ್ಯ ಮತದಾನ ಪದ್ದತಿ ಮೂಲಕ ಮತ ನೀಡಲು ಯಾವ ಅಡೆತಡೆಯೂ ಇರಬಾರದು. ಇದಕ್ಕೆ ಚುನಾವಣಾ ಆಯೋಗವು ಮುಕ್ತ ಅವಕಾಶ ಮಾಡಿಕೊಡಬೇಕಾಗಿರುತ್ತದೆ.

ಸಹಕಾರ ಚುನಾವಣಾ ಆಯೋಗ
ಆಯುಕ್ತರು
ಬೆಂಗಳೂರು

----2

ಚುನಾವಣೆಗಳನ್ನು ಯಾವ ಪ್ರಲೋಭನೆಗಳಿಗೂ ಒಳಗಾಗದಂತೆ ಪಾರದರ್ಶಕವಾಗಿ ನಡೆಸುವುದು ಆಯೋಗದ ಜವಾಬ್ದಾರಿಯಾಗಿದೆ. ಚುನಾವಣಾ ಆಯೋಗದ ಪರವಾಗಿ ನಿಮಗೆ ವಹಿಸಿರುವ ಪ್ರಾಂತ್ಯಗಳಲ್ಲಿ ಬರುವ ಜಿಲ್ಲೆಗಳಲ್ಲಿ ಮೇಲೆ ವಿವರಿಸಿದ ರೀತಿಯಲ್ಲಿ ಚುನಾವಣೆಗಳನ್ನು ನಡೆಸಬೇಕಾಗಿರುತ್ತದೆ.

ಪ್ರಾಂತೀಯ ವೀಕ್ಷಕರಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಿಕೆ, ಚೆಕ್‌ಲಿಸ್ಟ್ ರೀತ್ಯಾ/ಸಹಕಾರ ಸಂಘಗಳ ನಿಯಮಾವಳಿಗಳಿಗೆ ಅನುಗುಣವಾಗಿ ಜಿಲ್ಲಾ ಚುನಾವಣಾಧಿಕಾರಿಗಳು /ರಿಟರ್ನಿಂಗ್ ಆಫೀಸರ್ಸ್‌ಗಳು ಮತದಾನ ಕೇಂದ್ರ, ಗೊತ್ತುಪಡಿಸುವಿಕೆ ಮತದಾನ ಸಿಬ್ಬಂದಿ ವ್ಯವಸ್ಥೆ ಇನ್ನಿತರ ಹಲವಾರು ಹಂತಗಳಲ್ಲಿ ಶಾಸನಬದ್ಧವಾಗಿ ವಿವಿಧ ಅಧಿಕಾರಿಗಳು ನಿರ್ವಹಿಸಬೇಕಾಗಿರುವ ಕೆಲಸ/ಕಾರ್ಯಗಳ ಕುರಿತು ಆಯೋಗದ ಪರವಾಗಿ ಮೇಲ್ವಿಚಾರಣೆ ನಡೆಸಲು ಹಾಗೂ ಸಂಬಂಧಿಸಿದ ಜಿಲ್ಲಾ ಚುನಾಣಾಧಿಕಾರಿಗಳಿಗೆ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಲು ಪ್ರಾಂತೀಯವಾರು ಚುನಾವಣಾ ವೀಕ್ಷಕರನ್ನಾಗಿ ನೇಮಿಸುವುದು ಸೂಕ್ತವೆಂದು ಅಭಿಪ್ರಾಯಕ್ಕೆ ಬಂದು ಕೆಳಕಂಡ ಆದೇಶ ಹೊರಡಿಸಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ವಿಷಯವಾಗಿ ಪ್ರಾಂತೀಯ ಮಟ್ಟದಲ್ಲಿ ಮೇಲ್ವಿಚಾರಣೆ ನಡೆಸಲು ಈ ಕೆಳಕಂಡ ಸಹಕಾರ ಸಂಘಗಳ ಅಪರ ನಿಬಂಧಕರನ್ನು ಅವರ ಪದನಾಮದ ಮುಂದೆ ನಮೂದಿಸಿರುವ ಪ್ರಾಂತ್ಯದ ಚುನಾವಣಾ ವೀಕ್ಷಕರನ್ನಾಗಿ ನೇಮಕ ಮಾಡಿ ಆದೇಶಿಸಿದೆ.

1) ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) – ಬೆಂಗಳೂರು ಪ್ರಾಂತ್ಯ
2) ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ) – ಗುಲ್ಬರ್ಗಾ ಪ್ರಾಂತ್ಯ
3) ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) – ಮೈಸೂರು ಪ್ರಾಂತ್ಯ
4) ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) – ಬೆಳಗಾಂ ಪ್ರಾಂತ್ಯ

ಪ್ರಾಂತೀಯ ಚುನಾವಣಾ ವೀಕ್ಷಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಮಾಧ್ಯಮಿಕ ಸಂಘಗಳಿಗೆ ಕಾನೂನು ರೀತ್ಯಾ ಚುನಾವಣೆ ನಡೆಸುವ ಸಂಬಂಧ ಆಯೋಗದ ಪರವಾಗಿ ಮೇಲ್ವಿಚಾರಣೆ, ಹಂತ ಹಂತದಲ್ಲಿ ಆದ ಪ್ರಗತಿ ಬಗ್ಗೆ ಲಗತ್ತಿಸಿರುವ ಅನುಬಂಧದಲ್ಲಿನ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಆಯೋಗಕ್ಕೆ ವಾರಕ್ಕೊಮ್ಮೆ ತಪ್ಪದೇ ವರದಿ ಸಲ್ಲಿಸತಕ್ಕದ್ದು

ಸಹಕಾರ ಚುನಾವಣಾ ಆಯೋಗ ಆಯುಕ್ತರು ಬೆಂಗಳೂರು

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಇವರಿಗೆ,

**ಸಹಕಾರ ಸಂಘಗಳ ಅಪರ ನಿಬಂಧಕರು, ( )**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ,**
**ಬೆಂಗಳೂರು-560 052.**

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01
2. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
3. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗಾ ಪ್ರಾಂತ.
4. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ____________
5. ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ____________

# ಪ್ರಾಂತೀಯ ವೀಕ್ಷಕರು ತಮ್ಮ ಕಾರ್ಯನಿರ್ವಹಣೆಯಲ್ಲಿ ಗಮನಿಸಬೇಕಾದ ವಿಷಯಗಳು

## ಅನುಬಂಧ

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ತಿದ್ದುಪಡಿ ಅಧಿನಿಯಮಗಳ /ನಿಯಮಗಳ ಅವಕಾಶದಂತೆ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ಅವರ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳ, ಜಿಲ್ಲಾ ಚುನಾವಣಾಧಿಕಾರಿಯಾಗಿ ದಿನಾಂಕ: 08.01.2014 ರ ಆದೇಶದಂತೆ ನೇಮಕ ಮಾಡಲಾಗಿದೆ. [ನಿಯಮ 2(i-1)] [ಸೌಹಾರ್ದ ನಿಯಮ 1(ಜಿ–2)]
2. ಎರಡನೇ ಹಂತದಲ್ಲಿ – ಮಾಧ್ಯಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಕುರಿತು ಸಹಕಾರ ಚುನಾವಣಾ ಆಯೋಗವು ಚುನಾವಣೆ ನಡೆಸುವ ಬಗ್ಗೆ ಕೆಳಕಂಡಂತೆ ದಿನಾಂಕಗಳನ್ನು ಪ್ರಕಟಿಸಿದೆ.

   ದಿನಾಂಕ:19.04.2014 ರಿಂದ 21.04.2014 ರವರೆಗಿನ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ.

   ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಇದರ ನಿಯಮ 14 ರಂತೆ ಜಿಲ್ಲಾ ಚುನಾವಣಾಧಿಕಾರಿಯು ನಮೂನೆ–XI ರಲ್ಲಿ ಉದ್ದೇಶಿತ ಚುನಾವಣೆಯ ಸಂಬಂಧ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

3. ರಿಟರ್ನಿಂಗ್ ಆಫೀಸರ್‌ಗಳ ನೇಮಕ

| ಕ್ರಸಂ | ವರ್ಗ | ಒಟ್ಟು ಸಂಘಗಳು | ಆರ್.ಓ. ನೇಮಕ ಆಗಿರುವುದು | ಬಾಕಿ |
|---|---|---|---|---|
| 1 | ಹೊಸದಾಗಿ ನೋಂದಣಿ ಆದ ಸಂಘಗಳು | | | |
| 2 | ಸಾಮಾನ್ಯ ಚುನಾವಣೆ (ಪದಾಧಿಕಾರಿಗಳ ಚುನಾವಣೆ ಸೇರಿದಂತೆ) | | | |
| 3 | ಅವಧಿ ಮುಗಿದ ಪದಾಧಿಕಾರಿಗಳ ಚುನಾವಣೆ | | | |
| 4 | ಆಕಸ್ಮಿಕ ತೆರವಾದ ನಿರ್ದೇಶಕರ/ ಪದಾಧಿಕಾರಿಗಳ ಚುನಾವಣೆ | | | |

4. ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ ಮತದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ [ನಿಯಮ 13ಡಿ(3)(ಎ)]

| ಚುನಾವಣಾ ದಿನಾಂಕ | ಪ್ರಕಟಿಸಬೇಕಾದ ದಿನಾಂಕ |
|---|---|
| 19.04.2014 ಆದಲ್ಲಿ | 04.03.2014 |
| 20.04.2014 ಆದಲ್ಲಿ | 5.03.2014 |
| 21.04.2014 ಆದಲ್ಲಿ | 06.03.2014 |

ಸಹಕಾರ ಚುನಾವಣಾ ಆಯೋಗ ಆಯುಕ್ತರು ಬೆಂಗಳೂರು

5. ಸುಸ್ತಿದಾರರ ಪಟ್ಟಿ ಪ್ರಕಟಣೆ [ನಿಯಮ 13(D)3(a)]

6. ಅರ್ಹ ಮತದಾರರ ಅಂತಿಮ ಪಟ್ಟಿ ಪ್ರಕಟಣೆ [ನಿಯಮ 13(D)3(b)]

7. ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು

8. ಮತದಾನ ಸಿಬ್ಬಂದಿ ನೇಮಕಾತಿ

9. ಮಾದರಿ ನೀತಿ ಸಂಹಿತೆ

10. ಚುನಾವಣಾ ವೇಳಾ ಪಟ್ಟಿಯ ವಿವರಗಳು

– ರಿಟರ್ನಿಂಗ್ ಆಫೀಸರ್ ನಮೂನೆ–XII ರಲ್ಲಿ ಉದ್ದೇಶಿತ ಚುನಾವಣೆಯ ಕುರಿತು ಸಾರ್ವಜನಿಕ ಸೂಚನೆ ಹೊರಡಿಸತಕ್ಕದ್ದು.

11. ಪದಾಧಿಕಾರಿಗಳ ಅವಧಿ ಮುಗಿದ/ಮುಗಿಯಲಿರುವ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಉಳಿದ ಅವಧಿಗೆ ಪದಾಧಿಕಾರಿಗಳ ಚುನಾವಣೆ ನಡೆಸುವುದು –

12. ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಸಾಮಾನ್ಯ ಚುನಾವಣಾ ಮುಗಿದ ನಂತರ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸುವಿಕೆ – [ನಿಯಮ 14ಎಜಿ ಮತ್ತು ಸೌಹಾರ್ದ ನಿಯಮ (6) ರೀತ್ಯಾ]

13. ಕರ್ನಾಟಕ ಸಹಕಾರ ಸಂಘಗಳ ಅಧಿನಿಯ 1959/ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997/ನಿಯಮಗಳು 2004 ರ ಅವಕಾಶದಂತೆ, ಜಿಲ್ಲಾ ಚುನಾವಣಾಧಿಕಾರಿ/ರಿಟರ್ನಿಂಗ್ ಆಫೀಸರ್ಸ್ ಇನ್ನಿತರ ಅಧಿಕಾರಿಗಳ ಚುನಾವಣೆ ಸಂಬಂಧದ ಶಾಸನಬದ್ಧ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆಯೇ? ಎಂಬ ಬಗ್ಗೆ ಪರಿಶೀಲಿಸುವಿಕೆ

14. ಚುನಾವಣಾ ಸಿಬ್ಬಂದಿಗೆ ತರಬೇತಿ ವ್ಯವಸ್ಥೆ ಮಾಡಿರುವಿಕೆ

15. ಚುನಾವಣಾ ವೆಚ್ಚ ಭರಿಸುವಲ್ಲಿ ಸಹಕಾರ ಸಂಘಗಳ ಆರ್ಥಿಕ ಸ್ಥಿತಿಗತಿಗಳು –
ನಿಯಮ 14ಎಎ ಅನ್ವಯ ಚುನಾವಣೆಗೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ಸಹಕಾರ ಸಂಘವೇ ಭರಿಸತಕ್ಕದ್ದಾಗಿದೆ.

16. ಪ್ರಾಂತೀಯ ಚುನಾವಣಾ ವೀಕ್ಷಕರ ಗಮನಕ್ಕೆ ಬರುವ ಇತರೆ ಅಂಶಗಳು

ಸಹಕಾರ ಚುನಾವಣಾ ಆಯೋಗ
ಆಯುಕ್ತರು
ಬೆಂಗಳೂರು

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು